ಅ) *1993-94, 1994-95ರಲ್ಲಿ ವೆಚ್ಚ ಮಾಡಿರುವ ಹಣವೆಷ್ಟು?*

ಇ) *ಯೋಜನೆಯ ಪ್ರಾರಂಭಿಕ ಅಂದಾಜಿನ ಪ್ರಕಾರ ಮೈಕ್ರೋವಾಟರ್ ಶೆಡಗಳಿಗೆ ತಯಾರು ಮಾಡಿದ್ದ ಅಂದಾಜಿನ ಮೊತ್ತವೆಷ್ಟು? ಮೊದಲಿನ ಅಂದಾಜಿನಂತೆ ಯೋಜನೆಯನ್ನು ಅನುಷ್ಠಾನಕ್ಕೆ ತರದಿದ್ದರೆ ಯೋಜನೆಯ ಗುರಿ ಪೂರ್ಣಗೊಳ್ಳುತ್ತದೆಯೇ? ಮತ್ತು ದರ ಉಪಯೋಗ ರೈತರಿಗೆ ದೊರೆಯುತ್ತದೆಯೇ?*

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ದೇವಿಹಳ್ಳಿ ಜಲಾನಯನ ಯೋಜನೆಗಾಗಿ 1995-96ನೇ ಸಾಲಿಗೆ 53.20 ಲಕ್ಷ ರೂಗಳನ್ನು ಒದಗಿಸಲಾಗಿದ್ದು, ಇದರಲ್ಲಿ ಕಾಮಗಾರಿಗೆ 23.50 ಲಕ್ಷ ರೂಗಳು ಹಾಗೂ ಸಿಬ್ಬಂಧಿ ವರ್ಗಕ್ಕೆ 29.70 ಲಕ್ಷ ರೂಗಳೆಂದು ನಿಗಧಿಪಡಿಸಲಾಗಿದೆ (ಸಿಬ್ಬಂಧಿ ವೆಚ್ಚದಲ್ಲಿ ಕೃಷಿ ವಿಭಾಗ ಹೊರತುಪಡಿಸಲಾಗಿದೆ) ಈ ಯೋಜನೆಗೆ 150 ವಿವಿಧ ಹುದ್ದೆಗಳು ಮಂಜೂರಾಗಿದ್ದು, ಇದರಲ್ಲಿ 74 ಹುದ್ದೆಗಳು ಭರ್ತಿಯಾಗಿದೆ.

ಅ)		1993-94		1994-95	
		ರಾಜ್ಯ ಯೋಜನೆ	ವಿಶ್ವ ಬ್ಯಾಂಕ್ ಯೋಜನೆ	ರಾಜ್ಯ ಯೋಜನೆ	ವಿಶ್ವ ಬ್ಯಾಂಕ್ ಯೋಜನೆ
1.	ಸಿಬ್ಬಂಧಿ	11.03	22.907	13.68	9.000
2.	ಕಾಮಗಾರಿ	33.78	130.239	35.79	21.000
	ಒಟ್ಟು	**44.81**	**153.146**	**49.47**	**30.000**

ಇ) ಯೋಜನೆಯ ಪ್ರಾರಂಭದಲ್ಲಿ ರೂಪಿಸಿದ ಮಾಸ್ಟರ್ ಪ್ಲಾನಿನ ಪ್ರಕಾರ ಕಾಮಗಾರಿಗಳಿಗೆ 560.424 ಲಕ್ಷ ರೂಗಳನ್ನು ಹಾಗೂ ಸಿಬ್ಬಂಧಿ ವೆಚ್ಚಕ್ಕಾಗಿ 194.89 ಲಕ್ಷ ರೂಗಳನ್ನು ನಿಗಧಿಪಡಿಸಲಾಗಿತ್ತು, ಮಾಸ್ಟರ್ ಪ್ಲಾನಿನ ಪ್ರಕಾರ ರಾಜ್ಯ ಯೋಜನೆಯಲ್ಲಿ ಕಾಮಗಾರಿ ಗುರಿಯಾದ 326.974 ಲಕ್ಷರೂಗಳಿಗೆ ಬದಲಾಗಿ 380.22 ಲಕ್ಷ ರೂ.ಗಳನ್ನು ವೆಚ್ಚಮಾಡಲಾಗಿದೆ. ವಿಶ್ವಬ್ಯಾಂಕ್ ಯೋಜನೆಯಡಿ ಕಾಮಗಾರಿಗಾಗಿ ಹಾಕಿಕೊಳ್ಳಲಾದ 233.4880 ಲಕ್ಷ ರೂಗಳಿಗೆ ಬದಲಾಗಿ 1994-95ರವರೆಗೆ 250.099 ಲಕ್ಷ ರೂಗಳನ್ನು ವೆಚ್ಚಮಾಡಲಾಗಿದೆ, ರೈತರಿಗೆ ಈ ಯೋಜನೆಯ ಉಪಯೋಗಗಳು ದೊರೆಯುತ್ತಿದೆ.

ಕೊಪ್ಪಳ ತಾಲ್ಲೂಕಿನಲ್ಲಿ ಬೃಹತ್ ಕೈಗಾರಿಕ ಸ್ಥಾಪನೆ

2116 - ಶ್ರೀ ಸಂಗಣ್ಣ ಕರಡಿ (ಕೊಪ್ಪಳ) : ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ತಾಲ್ಲೂಕಿನಲ್ಲಿ ಎಷ್ಟು ಬೃಹತ್ ಕಾರ್ಖಾನೆಗಳನ್ನು ಸ್ಥಾಪಿಸಲು ಸರ್ಕಾರದವರು ಅನುಮತಿ ನೀಡಿರುವರು ಅವುಗಳ ಉತ್ಪಾದನಾ ಸಾಮರ್ಥ್ಯ ಎಷ್ಟು ಅವು ಯಾವುವು

ಆ) ಈ ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಉದ್ಯೋಗದ ಅವಕಾಶ ಕಲ್ಪಿಸಲು ಅವಕಾಶವಿದೆಯೇ?

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಕೊಪ್ಪಳ ತಾಲ್ಲೂಕಿನಲ್ಲಿ 2 ಬೃಹತ್ ಕಬ್ಬಿಣ ಕಾರ್ಖಾನೆಗಳನ್ನು ಸ್ಥಾಪಿಸಲು ಸರ್ಕಾರದ ವತಿಯಿಂದ ಅನುಮತಿ ನೀಡಲಾಗಿದೆ. ಅವುಗಳೆಂದರೆ (1) ಮೆ: ಕಿರ್ಲೋಸ್ಕರ ಫೆರಸ್ ಇಂಡಸ್ಟ್ರೀಸ್ ಲಿಮಿಟೆಡ್ (ಪಿಗ್ ಐರನ್) ಸಾಲಿಯಾನ 1.2 ಲಕ್ಷ ಮೆಟ್ರಿಕ್ ಟನ್ ಸಾಮರ್ಥ್ಯ (2) ಮೆ: ಕಲ್ಯಾಣಿ ಸ್ಟೀಲ್ ಲಿಮಿಟೆಡ್ (ಪಿಗ್ ಐರನ್ ಕಾರ್ಬನ್ ಅಲಾಯ ಅಂಡ್ ಇಂಜಿನಿಯರಿಂಗ್ ಸ್ಟೀಲ್) ಸಾಲಿಯಾನ 2.25 ಲಕ್ಷ ಮೆಟ್ರಿಕ್ ಟನ್ ಸಾಮರ್ಥ್ಯ.

ಆ) ಹೌದು.

ರಾಜ್ಯದಲ್ಲಿ ಖಾಸಗಿಯವರಿಗೆ ವಹಿಸುವ ಕೈಗಾರಿಕೆಗಳ ಸಂಖ್ಯೆ

2117 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಸರ್ಕಾರದ ಒಡೆತನದಲ್ಲಿರುವ ಕೈಗಾರಿಕೆಗಳನ್ನು ಖಾಸಗಿಯವರಿಗೆ ವಹಿಸಲು ನಿರ್ಧರಿಸಲಾಗಿರುವ ಒಟ್ಟು ಸಂಖ್ಯೆ ಎಷ್ಟು?

ಆ) ಕರ್ನಾಟಕ ರಾಜ್ಯದ ಕೈಗಾರಿಕಾ ನೀತಿಯೇನು?

ಇ) ಗಡಿ ಪ್ರದೇಶ ಬೆಳಗಾವಿಯಲ್ಲಿ ಹೊಸ ಕೈಗಾರಿಕೆಗಳನ್ನು ತೆರೆಯಲು ಸರ್ಕಾರ ಯೋಚಿಸಿದೆಯೇ?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಸತತವಾಗಿ ನಷ್ಟವನ್ನು ಅನುಭವಿಸುತ್ತಿರುವ ಸಾರ್ವಜನಿಕ ಉದ್ಯಮಗಳ ಪುನಃ ಶ್ಚೇತನವನ್ನು ಯಾವ ರೀತಿ ಕೈಗೊಳ್ಳಬೇಕೆಂಬ ವಿಷಯವನ್ನು ಸರ್ಕಾರವು ತೀವ್ರ ಪರಿಶೀಲಿಸುತ್ತಿದೆ. ಸಾರ್ವಜನಿಕ ಉದ್ಯಮಗಳ ಪುನರುಜ್ಜೀವನಕ್ಕೆ ಖಾಸಗೀಕರಣವು ನೆರವಾಗುವುದಾದಲ್ಲಿ ಈ ವಿಧಾನವನ್ನು ಸಹ ಪರಿಗಣಿಸಲಾಗುವುದು.

ಆ) ಜುಲೈ 1993ರಲ್ಲಿ ಅನುಮೋದಿಸಿದ ಕೈಗಾರಿಕಾ ನೀತಿ ಈಗ ಚಾಲ್ತಿಯಲ್ಲಿದೆ. ಹೊಸ ಕೈಗಾರಿಕಾ ನೀತಿಯನ್ನು ಇಷ್ಟರಲ್ಲಿಯೇ ಪ್ರಕಟಿಸಲಾಗುವುದು.

ಇ) ಸರ್ಕಾರದ ಗಡಿ ಪ್ರದೇಶದಲ್ಲಿ ಯಾವುದೇ ಹೊಸ ಕೈಗಾರಿಕೆಗಳನ್ನು ತೆರೆಯಲು ಯೋಚಿಸಿರುವುದಿಲ್ಲ.